ಅಧ್ಯಕ್ಷರು :- ಶ್ರೀ ಶೆಟ್ಟರ್‌ರವರೆ, 28ನೇ ತಾರೀಖು ಅವರು ಬಜೆಟ್ ಮೇಲೆ ಉತ್ತರ ಕೊಡುವಾಗ ಇದಕ್ಕೂ ಸಹ ಅವರು ಉತ್ತರ ಕೊಡುತ್ತಾರೆ. ಬಿಡಿ.

ಶ್ರೀ ಎಸ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಅಧ್ಯಕ್ಷರೆ, ಸರ್ಕಾರದ ಬಗ್ಗೆ ತಾವು ಮೃದುಧೋರಣೆ ತೋರಿದರೆ ಅವರು ಮುಂದಿನ ವಾರದಿಂದ ಯಾವುದಕ್ಕೂ ಉತ್ತರವನ್ನೇ ಕೊಡುವುದಿಲ್ಲ. ಪ್ರಶ್ನೆ ಬಂದ ಕೂಡಲೇ ಅದಕ್ಕೆ ಉತ್ತರ ಕೊಡಬೇಕೆಂದು ತಾವು ಸ್ವಲ್ಪ ಅವರಿಗೆ ನಿರ್ದೇಶನ ಕೊಡಬೇಕು.

ಅಧ್ಯಕ್ಷರು :- ಮೃದುಧೋರಣೆಯನ್ನು ನಾನು ಯಾರಿಗೂ ತೋರಿಸುತ್ತಿಲ್ಲ. ಕಾನೂನು ಪ್ರಕಾರ ಹೋಗುತ್ತಿದ್ದೇನೆ. ಹಾಗೂ ಸದನವನ್ನು ನಡೆಸುತ್ತಿದ್ದೇನೆ. ಅಷ್ಟೆ.

ಶ್ರೀ ಎಸ್ವೇಶ್ವರ ಹೆಗಡೆ :- ಇದಕ್ಕೆ ಇಡೀ ರಾಜ್ಯದಿಂದ ಮಾಹಿತಿ ತರಿಸಿಕೊಳ್ಳಬೇಕಾದ್ದಿಲ್ಲ.

ಅಧ್ಯಕ್ಷರು :- ಶ್ರೀ ಶ್ರೀಕಂಠಯ್ಯನವರೇ, ದಯವಿಟ್ಟು ಇದಕ್ಕೆ 28ನೇ ತಾರೀಖು ಬಜೆಟ್ ಭಾಷಣದಲ್ಲಿ ಉತ್ತರ ಹೇಳಿಬಿಡಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸದನದಲ್ಲಿ ಈಗಾಗಲೇ ವಿವರಣೆ ಕೊಟ್ಟಿದ್ದೇವೆ. ಹೇಳಿ ಆಗಿರುವುದರಿಂದ ಅದನ್ನೇ ಎಷ್ಟು ಸಲ ಹೇಳಬೇಕು?, ಇನ್ನೊಂದು ಸಲ ಸಹ ಹೇಳೋಣ ಬಿಡಿ. ಅದಕ್ಕೇನಂತೆ.

ಶ್ರೀ ಡಿ.ವಿ. ಸದಾನಂದಗೌಡ :- ಮಾನ್ಯ ಮಂತ್ರಿಗಳು ಕಂಪ್ಯೂಟರ್ ಇದ್ದ ಹಾಗೆ. ಅವರಿಗೆ ಯಾವುದನ್ನೂ ಕೂಡ ತಿಳಿದುಕೊಳ್ಳಬೇಕಾದಂಥ ಅವಶ್ಯಕತೆ ಇಲ್ಲ.

ಅಧ್ಯಕ್ಷರು :- ವೆರಿ ಗುಡ್. ಕಂಪ್ಯೂಟರ್ ವ್ಯಕ್ತಿ ಎಂದು ಹೇಳಿದರಲ್ಲಾ, ವೆರಿಗುಡ್.

ಶ್ರೀ ಜಗದೀಶ್ ಶೆಟ್ಟರ್ :- ಸ್ಟಾ ಂಪ್ ಪೇರ್ಸ್‌ನ್ನು ನಿಷೇಧ ಮಾಡಲಿಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ.

(ಗೊಂದಲ)

ಅಧ್ಯಕ್ಷರು :- ಶ್ರೀ ಶೆಟ್ಟರೆ, ಇದು ಪ್ರಶ್ನೋತ್ತರ ವೇಳೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :- ಯಾರಾದರೂ ಮುಷ್ಕರ ಹೂಡುತ್ತಾರೆ ಎಂದಾಕ್ಷಣ ಇವರು ಹುಷಾರಾಗಿಬಿಡುತ್ತಾರೆ. ಮುಷ್ಕರದ ಪ್ರಶ್ನೆ. ಅದು ನಮ್ಮ ಗಮನದಲ್ಲಿ ಇದೆ. ಆಗಲೇ ಹೇಳಿದ್ದೇವೆ.

ಅಧ್ಯಕ್ಷರು :- ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು..

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಸಚಿವರು :- ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ಹದಿನಾರನೇ ಪಟ್ಟಿಯಲ್ಲಿರುವ 108 ಪ್ರಶ್ನೆಗಳ ಪೈಕಿ 72 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತು. (ಅನುಬಂಧ - 1)